ಬೇರೆ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದಳು. ಪ್ರಯಾಣದ ಮಧ್ಯೆ ಇದೊಂದೆ ಅವಳಿಂದ ಬಂದ ತನ್ನ ಹಳೆಯ ಪ್ರೇಮ ಪುರಾಣಕ್ಕೆ ಸಂಬಂಧಿಸಿದ ಆಪ್ತ ಸಾಂಗತ್ಯದ ಸೊಲ್ಲಾಗಿ ಕಂಡಿತ್ತು. ವಾಡಿಯ ಮುಂಚೆ ತನ್ನೂರು ಶಂಕರವಾಡಿಯ ಕ್ರಾಸ್ ಬಂದಾಗ ಅವಳ ಹೊಲ ದಾರಿಯಲ್ಲಿ ಬಂದಿತ್ತು. ಇವಳು ಸಣ್ಣವಳಿದ್ದಾಗ, ತೊಗರಿ ಕಣ ಮಾಡಲು ಹೊಲಕ್ಕೆ ಬಂದು ಇಲ್ಲಿಯೇ ಉಳಿದುಕೊಂಡು ಬುತ್ತಿ ಉಂಡು ತತ್ರಾಣಿಯಲ್ಲಿ ನೀರು ಕುಡಿದು ತೊಗರಿ ಬುಡ್ಡೆ ಅಲಸಂದಿ ಹೆಸರು ಸುಟ್ಟುಕೊಂಡು ತಿಂದದ್ದು ಪ್ರಸ್ತಾಪಿಸಿದಳು. ಆದರೆ, ಇವನ ಜೊತೆ ಎಳ್ಳ ಅಮಾವಾಸ್ಯೆ, ಸಂಕ್ರಾಂತಿ, ಶ್ರಾವಣದಲ್ಲಿ ಇಲ್ಲಿಗೆ ಬಂದಿದ್ದು ನೆನಪಿಸಲೇ ಇಲ್ಲ. ಅವಳ ಗಾಢ ಮೌನ. ದೂಳಾದಂತಹ ಆಕಾಶ, ಎಲ್ಲೆಂದರಲ್ಲಿ ಗಾಯಗೊಂಡು ಬಿದ್ದಂತಹ ಭೂಮಿ. ಇನ್ನೋವಾದಲಿ ತೇಲಿಬರುತ್ತಿರುವ ತೋಡಿಯಾ ಕಾಂತಾರೀಯ ಎಂಬ ದುಃಖತಪ್ತ ರಾಗ, ಎಲ್ಲವೂ ಇವನ ಮನಸ್ಸಿನಲಿ ಸ್ಥಾಯಿಗೊಂಡು ಇನ್ನೋವಾ ವಾಹನವನ್ನು ಇಳಿದು ಮರಳಿ ಹೋಗಬೇಕು ಎನ್ನುವಾಗಲೇ ಇವನೇ ಹೇಳಿದ, 'ಈ ರಾಗವನ್ನು ಬದಲಿಸಬಹುದೇ' ಎಂದು. ಅವಳೇ ರಿಮೋಟಿನಿಂದ ಬದಲಾಯಿಸಿ ಹಂಸಧ್ವನಿ ರಾಗವನ್ನು ಹಾಕಿದಳು. ಅದು ಮಳೆ ಬಿದ್ದ ನೆಲದ ಮಣ್ಣಗಂಧದ ವಾಸನೆಯಂತೆ ರಾಗ ಹರಡುತ್ತಿದ್ದಾಗಲೇ ವಾಡಿ ಎಂಬ ಊರು ಬಂದಿತ್ತು.

ಇವಳಿಗೆ ಯಾವುದೇ ಆದಿಯ ಅರಿವಿಲ್ಲ ಅಂತ್ಯದ ಗುರುತಿಲ್ಲ. ಈಗಾಗಲೇ ಇವಳು ತನ್ನ ಸ್ಮೃತಿಪಟಲದಿಂದ ತನ್ನನ್ನು ದೂರ ಮಾಡಿದ್ದಾಳೆ. ಅವಳು ಫೋನ್ ಮಾಡಿದಾಕ್ಷಣವೇ 'ನೀನು ಯಾರು' ಎಂದು ಕೇಳಬೇಕಾಗಿತ್ತು, ಭೇಟಿ ಧಿಕ್ಕರಿಸಬೇಕಾಗಿತ್ತು ಎಂದು ಯೋಚಿಸುತ್ತಿರುವಾಗಲೆ ಮೂರು ನಾಲ್ಕು ರೈಲುಗಳು ವಾಡಿಯ ಜಂಕ್ಷನ್‌ನಲ್ಲಿ ಒದರುತ್ತ ನಿಂತಿದ್ದವು. ಅದರ ಶಬ್ದಗಳು ಇಡೀ ಊರಿನ ತುಂಬಾ ಮಾರ್ದನಿಸಿದವು.

ಅವಳ ನಿಗೂಢ ಅಂತರಾಳದ ನಿಕ್ಷೇಪ ಇವನಿಗೆ ಇನ್ನೂ ಗೊತ್ತಾಗದೇ ಹಾಗೆಯೇ ಉಳಿದಿತ್ತು. ಆದರೆ, ವಾಡಿ ಎಂಬ ಊರು ಬಂದತಕ್ಷಣ ಇವನಿಂದ ಕಳಚಿಕೊಂಡ ಅವಳು ಬಹುವಾಗಿ ಕ್ರಿಯಾಶೀಲಳಾದಳು. ವಾಡಿ ಎಂಬ ಊರು ಸಹ ಒಂದು ದೊಡ್ಡ ಕೊಳಚೆ ಪ್ರದೇಶವಾಗಿ ಕಾಣುತ್ತಿತ್ತು. ಇನ್ನೋವಾ ಒಂದು ಕಡೆ ನಿಲ್ಲಿಸಿದ ಡ್ರೈವರ್. ಒಂದು ಬೃಹತ್ತಾದ ನಾಲ್ಕು ಅಂತಸ್ತಿನ ಕಟ್ಟಡ. ಅದಕ್ಕೆ ತಗಲಾಕಿಕೊಂಡ ಒಂದು ದೊಡ್ಡ ಬೋರ್ಡ್. ಹೆಸರು ಬಬಿತಾ ಭೂಮಿ ಫೌಂಡೇಶನ್ ಎಂದು ಬರೆಯಲಾಗಿತ್ತು. ಆ ಕಟ್ಟಡದ ಗ್ರೌಂಡ್ ಫ್ಲೋರ್ ನಲ್ಲಿ ನೂರಾರು ಜನ ಇವಳನ್ನು ಸ್ವಾಗತಿಸಿದರು. ಅದರ ಉಸ್ತುವಾರಿ ಮಾಡುವವನ ಹೆಸರು ರಾಜಶೇಖರ ಎಂ. ಫೈಲುಗಳನ್ನು ತೆಕ್ಕೆಗಟ್ಟಲೇ ಹಿಡಿದುಕೊಂಡು ಬಂದ ಮತ್ತು ವೇಗವಾಗಿ ವಾತಾನುಕೂಲಕದ ಸುಸಜ್ಜಿತವಾದ ಒಂದು ಛೇಂಬರಿಗೆ ಕರೆದುಕೊಂಡು ಹೋದ. ಶಿಷ್ಟಾಚಾರಕ್ಕಾಗಿ, 'ಮೇಡಮ್ ಏನಾದರೂ ತಗೋತೀರಾ' ಎಂದ. ಹತ್ತು ಎಳನೀರನ್ನೂ ಅಲ್ಲಿಯೇ ರೂಮಿನಲ್ಲಿ ಕೆತ್ತಿಸಿ ಇಟ್ಟಿದ್ದ ಮತ್ತು ಅದನ್ನು ಗ್ಲಾಸಿನಲ್ಲಿ ಹಾಕಿಕೊಟ್ಟ. ಅವಳು, 'ನಾನು ಕುಡಿಯಲಿಕ್ಕೆ ತಿನ್ನಲಿಕ್ಕೆ ಇಲ್ಲಿಗೆ ಬಂದಿಲ್ಲ. ಪ್ರಗತಿ ಪರಿಶೀಲನೆಗೆ ಬಂದಿದ್ದೇನೆ' ಎಂದು ಗದರಿಸಿದಳು. 'ನನಗೆ ನಿಮ್ಮ ಓಲೈಕೆ, ಆತಿಥ್ಯ ಬೇಡ. ನನಗೆ ರಿಜಲ್ಟ್ ಬೇಕು' ಎಂದು ಗದರಿಸಿದಳು. ಮೆಲ್ಲನೆ ಮಾತಾಡುತ್ತಿದ್ದವಳು ಸಿಡಿಗುಂಡಿನಂತೆ ಒಮ್ಮೆಗೆ ಆರ್ಭಟಿಸುತ್ತಿದ್ದಳು. ಸೂರ್ಯ ಇಂದು ತನ್ನ ನಾಟಕ ನಡೆಸಿದ್ದ. ಹೋಗುವುದು ಬರುವುದು ಹೋಗುವುದು ಬರುವುದು ಮಾಡುತ್ತಿದ್ದ. ಸೋಲಾಪುರದಿಂದ ಗುಂತಕಲ್‌ವರೆಗೆ. ಕವರ್ ಮಾಡಿದಿವಿ ಮೇಡಮ್. ಟೋಟಲ್ 200 ಮಕ್ಕಳನ್ನು ಕವರ್ ಮಾಡಿದ್ದೀವಿ, ಈಗಾಗಲೇ 300 ಮಕ್ಕಳನ್ನು ಮುಖ್ಯವಾಹಿನಿಗೆ ತಂದಿದ್ದೀವಿ ಎಂದು ಫೋಟೊಗಳನ್ನು ಹಚ್ಚಿದ ಒಂದು ರಿಜಿಸ್ಟರ್‌ನ್ನು ಬಬಿತಾಳ ಮುಂದೆ ಹಿಡಿದ. 'ಇರೇಜರ್ ಇನ್‌ಹೇಲರ್ ಅಡಿಕ್ಟ್ ಎಷ್ಟು ಜನ ಇದ್ದಾರೆ?' ಎಂದಳು.

95% ಇದ್ದಾರೆ ಮೇಡಮ್. ಇದರಲ್ಲಿ 70% ಮಕ್ಕಳು ಸ್ಥಿತಿವಂತ ಕುಟುಂಬಗಳಿಂದಲೇ ಬಂದಿದ್ದಾರೆ. ವಿಚಿತ್ರವೆಂದರೆ ಇವರ ಕೇಸ್ ಸ್ಟಡಿ ಗಮನಿಸಿದರೆ; ತಂದೆಯ ಕಠೋರ ಶಿಸ್ತು, ತಂದೆ ತಾಯಿಯ ಅನೈತಿಕ ಚಟುವಟಿಕೆಗಳಿಂದ ರೋಸಿ ಬಂದಿದ್ದಾರೆ ಎಂದು ವಿವರಿಸಿದ. ಎಲ್ಲವನ್ನು ಗಮನಿಸಿದಾಗ ಇವನ ಜ್ಞಾನಕ್ಕೆ ದಕ್ಕಿದ್ದು, ರೈಲ್ವೆ ಡಬ್ಬಿಯಲ್ಲಿ ಕಸ ಹೊಡೆದುಕೊಂಡು ಬರುವ ಮಕ್ಕಳ ಬಗ್ಗೆ ಇವರು ಏನೋ ಕೆಲಸ ಮಾಡುತ್ತಾರೆ ಎಂದಾಗಿತ್ತು. ಇರೇಜರ್ ಯಾಕೆ ಸ್ಮೋಕ್ ಮಾಡುತ್ತಾರೆ ಎನ್ನುವುದು ಇವನ ಪ್ರಶ್ನೆಯಾಗಿತ್ತು.

ಇರೇಜರ್ ಅದು ನೋಟ್ ಬುಕ್‌ನಲ್ಲಿ ತಪ್ಪಾದರೆ,